	(ರೂ.)
1998–99	1,015.29 ಲಕ್ಷ
99–2000	845.66 ಲಕ್ಷ
2000–01	595.44 ಲಕ್ಷ
2001–02	395.44 ಲಕ್ಷ
2002–03	431.51 ಲಕ್ಷ
2003–04	102.33 ಲಕ್ಷ

(ಜೂನ್ ಅಂತ್ಯದವರೆಗೆ)

ಈ) ಬಂದರು ಇಲಾಖೆಗೆ ಹಸ್ತಾಂತರಿಸುವ ಪೂರ್ವದಲ್ಲಿ ಸಣ್ಣ ನೀರಾವರಿ ಇಲಾಖೆಯು ನಿರ್ವಹಿಸಿದ ಕಾಮಗಾರಿಗಳ ಬಗ್ಗೆ ಸ್ಥಳೀಯರ ಆರೋಪ ಇತ್ತು. ಇದರ ಬಗ್ಗೆ ತನಿಖೆ ನಡೆಸಲಾಗಿದೆ.

ಉ) ತನಿಖಾ ಸಮಿತಿಯು ಈಗಾಗಲೇ ವರದಿಯನ್ನು ಸಲ್ಲಿಸಿರುತ್ತದೆ. ಇದು ಪರಿಶೀಲನೆಯಲ್ಲಿದೆ.

ಊ) ಹೌದು. ತೀವ್ರ-ಸಮುದ್ರ ಕೊರೆತ ಸಂಭವಿಸುವತ್ತಿರುವ ಪ್ರದೇಶಗಳಲ್ಲಿ ಸೆಂಟ್ರಲ್ ವಾಡರ್ ಅಂಡ್ ಪವರ್ ರೀಸರ್ಚ್ ಸ್ಟೇಷನ್ ಪುಣೆ ಮತ್ತು ಕರ್ನಾಟಕ ಇಂಜಿನಿಯರಿಂಗ್ ರೀಸರ್ಚ್ ಸ್ಟೇಷನ್, ಮೈಸೂರು ಇವರು ನೀಡಿದ ವಿನ್ಯಾಸದಂತೆ ಶಾಶ್ವತ ತಡೆಗೋಡೆ ನಿರ್ಮಿಸಲು ಕಾಲಕಾಲಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ. ಈಗಾಗಲೇ 48.26 ಕಿ.ಮೀ. ಶಾಶ್ವತ ತಡೆಗೋಡೆಯನ್ನು ರಾಜ್ಯ ಸರ್ಕಾರದ ವತಿಯಿಂದ ನಿರ್ಮಿಸಲಾಗಿದೆ. ಕೇಂದ್ರ ಸರ್ಕಾರದ ಸಹಾಯಧನದಲ್ಲಿ "ನ್ಯಾಷನಲ್ ಕೋಸ್ಟಲ್ ಪ್ರೊಟೆಕ್ಷನ್ ಪ್ರಾಜೆಕ್ಟ್" ಕಾರ್ಯಕ್ರಮದಡಿಯಲ್ಲಿ 48.875 ಕಿ.ಮೀ. ಉದ್ದದ ಶಾಶ್ವತ ತಡೆಗೋಡೆ ನಿರ್ಮಿಸಲು ರೂ. 135.95 ಕೋಟಿ ಅಂದಾಜಿನ ಪ್ರಸ್ತಾವನೆಯನ್ನು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು ಮಂಜೂರಾತಿ ನಿರೀಕ್ಷಿಸಲಾಗಿದೆ. ಇದಲ್ಲದೆ ಫ್ರಾನ್ಸ್ ದೇಶದ ಸಹಯೋಗದೊಂದಿಗೆ 'ಸ್ಟೆಬಿಪ್ಲೇಜ್' ಎಂಬ ತಂತ್ರಜ್ಞಾನವನ್ನು ಉಪಯೋಗಿಸಿ ಉಳ್ಳಾಲದಲ್ಲಿ ಸಮುದ್ರ ಕೊರೆತ ಕಾಮಗಾರಿಯನ್ನು ಪ್ರಾಯೋಗಿಕವಾಗಿ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ.

ರಾಜ್ಯದಲ್ಲಿ ಭಾರಿ ಮತ್ತು ಮಧ್ಯಮ ಉದ್ಯಮಗಳಿಗೆ ಪ್ರೋತ್ಸಾಹ

3657(4143) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಭಾರೀ ಮತ್ತು ಮಧ್ಯಮ ಹೊಸ ಉದ್ಯಮಗಳು ಬರುವ ನಿಟ್ಟಿನಲ್ಲಿ ಹೊಸ ಕೈಗಾರಿಕಾ ನೀತಿಯನ್ನು ಮಾಡಲಾಗಿದೆಯೇ;

ಆ) ಹಾಗಿದ್ದಲ್ಲಿ, ಯಾವ ಯಾವ ಸವಲತ್ತುಗಳನ್ನು ಹೊಸ ಉದ್ಯಮದವರಿಗೆ ಕೊಡಲಾಗುವುದು;

ಇ) ಈ ಹೊಸ ಪ್ರೋತ್ಸಾಹ ನೀಡಿದ್ದರಿಂದ ಎಷ್ಟು ಹೊಸ ಉದ್ಯಮಗಳು ರಾಜ್ಯದಲ್ಲಿ ಬಂದಿರುವುವು; ಹಾಗೂ ಎಷ್ಟು ಮೊತ್ತದ ಹಣವನ್ನು ಇವರು ತೊಡಗಿಸಿರುವುದು (ಪೂರ್ಣ ವಿವರ ನೀಡುವುದು);

ಈ) ಈ ಉದ್ಯಮಗಳು ಯಾವ ಯಾವ ಭಾಗದಲ್ಲಿ ಬಂದಿರುವುವು; ಇವುಗಳು ಕೇವಲ ಹಳೆ ಮೈಸೂರಿನಲ್ಲಿ ಮಾತ್ರ ಬರುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಉತ್ತರ ಕರ್ನಾಟಕದಲ್ಲಿಯೂ ಸಹ ಈ ಉದ್ಯಮಗಳು ಬರಲು ಕ್ರಮಕೈಗೊಳ್ಳಲಾಗುವುದೇ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಹೌದು

ಆ) ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಈ ಕೆಳಕಂಡ ಸವಲತ್ತುಗಳನ್ನು ನೀಡಲಾಗುವುದು:

ಅ. ಪ್ರವೇಶ ತೆರಿಗೆ ವಿನಾಯಿತಿ : ಬಿ ವಲಯ–3ವರ್ಷ
ಸಿ ವಲಯ–5ವರ್ಷ
ಡಿ ವಲಯ–3ವರ್ಷ

ಆ. ಮುದ್ರಾಂಕ ಶುಲ್ಕ ಮತ್ತು
ನೋಂದಣಿ ಶುಲ್ಕ ವಿನಾಯಿತಿ: (1–4–2001 ರಿಂದ 31–3–2003ರವರೆಗೆ ಮಾತ್ರ)
ಬಿ ವಲಯ–ಶೇ.50ರಷ್ಟು
ಸಿ ಮತ್ತು ಡಿ ವಲಯ–ಶೇ.100ರಷ್ಟು

ಇ) ಅಂದರೆ, ದಿನಾಂಕ: 1.4.2001 ರಿಂದ 225 ಭಾರಿ ಮತ್ತು ಮಧ್ಯಮ ಕೈಗಾರಿಕೆಗಳನ್ನು ಸ್ಥಾಪಿಸಲು ಅನುಮೋದನೆ ನೀಡಲಾಗಿದೆ.

ಇವುಗಳ ಅನುಷ್ಠಾನ ವಿವಿಧ ಹಂತಗಳಲ್ಲಿದೆ. ಇವುಗಳು ಹೂಡುವ ಬಂಡವಾಳ 10900.31 ಕೋಟಿ ರೂ.ಗಳಾಗಿದ್ದು ಇದರಲ್ಲಿ 1,18,299 ಜನರಿಗೆ ಉದ್ಯೋಗಾವಕಾಶ ದೊರಕುವ ಸಾಧ್ಯತೆ ಇದೆ.

ಈ) ಉದ್ಯಮಗಳು ರಾಜ್ಯದಲ್ಲಿ ಎಲ್ಲಾ ಭಾಗಗಳಲ್ಲಿಯೂ ಇದ್ದು ಬೆಂಗಳೂರು (ನಗರ) ಮತ್ತು ಬೆಂಗಳೂರು (ಗ್ರಾಮಾಂತರ) ಈ ಎರಡು ಜಿಲ್ಲೆಗಳಲ್ಲಿ ಹೆಚ್ಚು ಕೈಗಾರಿಕೆಗಳು ಬಂದಿವೆ. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಹೆಚ್ಚು ಪ್ರದೇಶಗಳನ್ನು ಸಿ ಮತ್ತು ಡಿ ವಲಯವೆಂದು ಘೋಷಿಸಿದ್ದು, ಈ ವಲಯದಲ್ಲಿ ಅವಶ್ಯಕತೆಗೆ ತಕ್ಕಂತೆ ಮೂಲಭೂತ ಸೌಲಭ್ಯಗಳನ್ನು ಕೆಐಎಡಿಬಿ ಮುಖಾಂತರ ಮತ್ತು ರಿಯಾಯಿತಿ ಮತ್ತು ಪ್ರೋತ್ಸಾಹಗಳನ್ನು ಹೊಸ ಕೈಗಾರಿಕಾ ನೀತಿ 2001 ರಂತೆ ದೊರಕಿಸಿಕೊಡಲಾಗುವುದು.

ಈ ವಲಯದಲ್ಲಿ ತೀವ್ರಗತಿಯಲ್ಲಿ ಕೈಗಾರಿಕಾ ಅಭಿವೃದ್ಧಿಪಡಿಸಲು ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಅಂದರೆ, (ನಿರ್ದಿಷ್ಟ ಕೈಗಾರಿಕಾ ಮೂಲಭೂತ ಸೌಕರ್ಯ) ಕೃಷಿ ಆಹಾರ ಸಂಸ್ಕರಣ ಉದ್ಯಾನ (ಬಾಗಲಕೋಟೆ, ಜೀವಗಿ ಮತ್ತು ಬೆಳಗಾಂ) ಅಪೆರಲ್ ಪಾರ್ಕ್ (ಬಳ್ಳಾರಿ) ಸ್ಥಾಪಿಸಲು ಯೋಜನೆ ಹಮ್ಮಿಕೊಳ್ಳಲಾಗಿದೆ.

ಉದ್ಯಮಶೀಲ ತರಬೇತಿಯನ್ನು ಸಿಡಾಕ್, ಧಾರವಾಡ ಸಂಸ್ಥೆಯಿಂದ ಕಲ್ಪಿಸಲಾಗುವುದು ಹಾಗೂ ರಾಜೀವ್ ಗಾಂಧಿ ಸ್ಟೀಲ್ ಟೆಕ್ನಾಲಜಿ ಇನ್‌ಸ್ಟಿಟ್ಯೂಟ್, ತೋರಣಗಲ್ಲು, ಬಳ್ಳಾರಿ ಜಿಲ್ಲೆಯಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿಪಡಿಸುವ ಕೇಂದ್ರ ಸ್ಥಾಪಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

(ಕೈಗಾರಿಕೆಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ)

Statement showing the details of project approved
District-wise details of project approvals during 2001-2002 & 2002-2003

Sl.No.	District	No. of Projects	Investment (In Crores)	Employment Potential
1	2	3	4	5
1.	Bagalkot	5	135.06	1394
2.	Bangalore Rural	14	588.38	2163

1	2	3	4	5
3.	Bangalore Urban	111	5509.02	96128
4.	Belgaum	3	43.45	85
5.	Bellary	8	175.29	1122
6.	Bidar	1	25.25	56
7.	Bijapur	2	183.90	906
8.	Chamrajanagar	1	19.48	60
9.	Chikmagalore	2	32.00	100
10.	Chitradurga	1	49.79	60
11.	Dakshina Kannada	4	125.18	1180
12.	Davanagere	4	49.79	684
13.	Dharwad	6	110.71	8142
14.	Gadag	1	33.00	1500
15.	Gulbarga	6	111.49	179
16.	Hassan	4	80.23	219
17.	Haveri	0	0.00	0
18.	Kodagu	1	5.00	72
19.	Kolar	4	21.68	365
20.	Koppal	5	135.60	275
21.	Mandya	4	79.28	167
22.	Mysore	9	225.72	857
23.	Raichur	6	153.76	301
24.	Shimoga	7	276.87	1373
25.	Tumkur	4	81.02	142
26.	Udupi	1	15.66	70
27.	Uttarakannada	6	159.15	1647
28.	Combined Dists.	2	773.84	125
29.	Entire Karnataka	3	1591.00	929
	Total	**225**	**10900.31**	**118299**

ರಾಜ್ಯದಲ್ಲಿ ಸಣ್ಣ ಕೈಗಾರಿಕೆ ಉದ್ಯಮಗಳಿಗೆ ಪ್ರೋತ್ಸಾಹ

3658(4144) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕೆ ಹೊಸ ಉದ್ಯಮಗಳು ಬರುವ ನಿಟ್ಟಿನಲ್ಲಿ ಹೊಸ ಕೈಗಾರಿಕಾ ನೀತಿಯನ್ನು ಮಾಡಲಾಗಿದೆಯೆ;